## ಕಿರುತೆರೆ ಎನ್ನುವ ಜೀವನದಿ



‘ಉದಯ’ದಲ್ಲಿ ‘ಸದಾ ನಿಮ್ಮೊಂದಿಗೆ’ ಲಕ್ಷ್ಮಿ

ಕನ್ನಡದಲ್ಲಿ ಕೂಡ ಬೆಳ್ಳಿತೆರೆಯಿಂದ ಕಿರುತೆರೆಗೆ ತಾರಾವರ್ಚಸ್ಸು ಪ್ರವಹಿಸುತ್ತಲೇ ಇದೆ. ಆ ಹರಿವನ್ನು ಧಾರಾವಾಹಿಗಳಿಂದಲೇ ಗುರ್ತಿಸಬೇಕು. ಕನ್ನಡ ಕಿರುತೆರೆಯ ಶೈಶವದ ಅವಸ್ಥೆಯಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದ್ದವರಲ್ಲಿ ರವಿಕಿರಣ್, ಸುನೀಲ್ ಪುರಾಣಿಕ್, ಬಿ.ಎಸ್. ಲಿಂಗದೇವರು ಹಾಗೂ ಟಿ.ಎನ್. ಸೀತಾರಾಮ್ ಮುಖ್ಯರು. ಇವರಲ್ಲಿ ಲಿಂಗದೇವರು ಕನ್ನಡ ಕಿರುತೆರೆ ಹಾಗೂ ಬೆಳ್ಳಿತೆರೆಯ ನಡುವೆ ಕೊಂಡಿಯೊಂದನ್ನು ಕಲ್ಪಿಸಿದರು. ‘ಸ್ವರಸಂಪದ’ ಧಾರಾವಾಹಿಗಾಗಿ ಪ್ರಸಿದ್ಧ ಸಿನಿಮಾ ನಟರಾದ ಕಲ್ಯಾಣ್‌ಕುಮಾರ್ ಹಾಗೂ ಲೋಕೇಶ್ ಅವರನ್ನು ಕರೆತಂದರು. ಇಪ್ಪತ್ತೈದು ವರ್ಷಗಳ ಹಿಂದೆ ಕನ್ನಡ ಸಿನಿಮಾದ ಇಬ್ಬರು ಖ್ಯಾತನಟರು ಧಾರಾವಾಹಿಯಲ್ಲಿ ನಟಿಸಿದ್ದು ದೊಡ್ಡ ಸುದ್ದಿಯಾಗಿತ್ತು. ಇದರ ಬೆನ್ನಿಗೇ ‘ಭಾವೀ ಭಾರತದ ಶಿಲ್ಪಿಗಳು’ ಎನ್ನುವ ಧಾರಾವಾಹಿಗೆ ಕೆ.ಎಸ್. ಅಶ್ವತ್ಥ್ ಅವರನ್ನು ಲಿಂಗದೇವರು ಕರೆತಂದರು.

‘ಸ್ವರಸಂಪದ’ ಹಾಗೂ ‘ಭಾವೀ ಭಾರತದ ಶಿಲ್ಪಿಗಳು’ ಧಾರಾವಾಹಿಗಳಿಗೆ ದೊರೆತ ತಾರಾ ವರ್ಚಸ್ಸು ತಮಗೆ ಕೂಡ ಜನಪ್ರಿಯತೆ ತಂದುಕೊಟ್ಟಿದ್ದನ್ನು, ಅಮೆರಿಕ ಪ್ರವಾಸದ ಸಂದರ್ಭದಲ್ಲಿ ಅಮೆರಿಕನ್ನಡಿಗರು ಧಾರಾವಾಹಿಗಳನ್ನು ಪ್ರಸ್ತಾಪಿಸಿ ಪ್ರೀತಿಯಿಂದ ಮಾತನಾಡಿಸಿದ ಸವಿನೆನಪುಗಳನ್ನು ಲಿಂಗದೇವರು ಈಗಲೂ ಪುಳಕಿತರಾಗಿ ನೆನಪಿಸಿಕೊಳ್ಳುತ್ತಾರೆ.

ತೊಂಬತ್ತರ ದಶಕ ಕನ್ನಡ ಸಿನಿಮಾದ ಮಟ್ಟಿಗೆ ಸಂಕ್ರಮಣದ ಕಾಲ. ಹೊಸ ಕಲಾವಿದರ ಆಗಮನದಿಂದಾಗಿ ಹಿರಿಯ ಕಲಾವಿದರು ಕೊಂಚ ಮಂಕಾಗಿದ್ದ ಕಾಲವದು. ಅದೇ ಸಂದರ್ಭದಲ್ಲಿ ಕನ್ನಡ ಚಿತ್ರಗಳ ನಿರ್ಮಾಣ ಕೂಡ ತುಸು ಕುಂಟತೊಡಗಿತ್ತು. ಇಂಥ ಸಂದರ್ಭದಲ್ಲಿ ಕಿರುತೆರೆಯಲ್ಲಿ ಒಳ್ಳೆಯ ಅವಕಾಶ ದೊರೆಯುವುದಾದರೆ ಬೇಡ ಎನ್ನುವ ಸ್ಥಿತಿಯಲ್ಲಿ ಸಿನಿಮಾ ಕಲಾವಿದರಿರಲಿಲ್ಲ. ಜೀವನೋಪಾಯಕ್ಕಾಗಿ ಸಿನಿಮಾ ನಟರು ಬೇರೆ ಮಾಧ್ಯಮದಲ್ಲಿ ತೊಡಗಿಕೊಳ್ಳುವುದು ಕನ್ನಡ ಚಿತ್ರರಂಗದಲ್ಲಿ ಹೊಸತೇನೂ ಅಲ್ಲ. ಕನ್ನಡದ ಮೊದಲ ವಾಕ್ಚಿತ್ರದಲ್ಲಿ ನಟಿಸಿದ್ದ ಆರ್. ನಾಗೇಂದ್ರರಾವ್ ಹಾಗೂ ಸುಬ್ಬಯ್ಯನಾಯ್ಡು ಕೂಡ ನಾಟಕ ಕಂಪನಿ ಕಟ್ಟಿಕೊಂಡು ಊರೂರು




I Manufacturer: **ASUM**, Pune. **020-65001785** I Customer Care: Rahul: **94816 00865**, Datta: **0 91300 26068** I **asumkj@gmail.com** I **www.asum.com** I

**Distributor: Yellapur:** Shri Rama Stores: **08419-262180** I **Bangalore:** Mohan Pharma: **080-22874575** I **Mangalore:** Vivek Traders: **0824-2496963** I **Bellary:** Kalwa Agencies: **9379999406** I **Belgaum:** Satyam Ayurvedic & Gen. Distributor: **0831-4206784**